

## ಮೌಲಾನಾ ಆಜಾದ್: ಧಾರ್ಮಿಕ ಸಮನ್ವಯದ ಹರಿಕಾರ

**ಮೌಲಾನಾ ಆಜಾದ್ ಸ್ವತಂತ್ರ ಭಾರತದ ಪ್ರಥಮ ಶಿಕ್ಷಣ ಮಂತ್ರಿಯಾಗಿದ್ದರು. ಭಾರತದ ಮೊದಲನೇ ಐಐಟಿ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ಸ್ಥಾಪನೆಯಾಗಿದ್ದು ಆಜಾದ್ ಕಾಲದಲ್ಲಿ ಅಂದರೆ 1951ರಲ್ಲಿ. 1953ರಲ್ಲಿ ಅವರು ವಿಶ್ವವಿದ್ಯಾಲಯ ಅನುದಾನ ಆಯೋಗ (ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್) ಸ್ಥಾಪನೆಗೆ ಕಾರಣರಾದರು. ಬೆಂಗಳೂರಿನಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯ ಅಭಿವೃದ್ಧಿಗೆ ಅವರು ಸಹಯೋಗ ನೀಡಿದರು. ಅವರ ಜನ್ಮದಿನ ನವೆಂಬರ್ 11ನ್ನು ಇಡೀ ಭಾರತದಲ್ಲಿ 'ರಾಷ್ಟ್ರೀಯ ಶಿಕ್ಷಣ ದಿನ'ವನ್ನಾಗಿ ಆಚರಿಸಲಾಗುತ್ತಿದೆ.**

ಅಬುಲ್ ಕಲಾಂ ಆಜಾದ್ ಅವರ ಪೂರ್ಣ ಹೆಸರು ಅಬುಲ್ ಕಲಾಂ ಮುಹಿಯುದ್ದೀನ್ ಅಹ್ಮದ್ ಆಜಾದ್. (Abul Kalam Muhiyuddin Ahmed Azad مولانا ابـــوالکلام ىمح الدىن احمد آزاد,) ಆಜಾದ್ ಎಂಬುದು ಅವರ ಲೇಖನಿ ನಾಮ. 1888ರ ನವೆಂಬರ್ 11ರಂದು ಅವರು ಜನಿಸಿದರು. ಆಜಾದ್ ಅವರದು ಉಲೇಮಾ (ಅಂದರೆ ಇಸ್ಲಾಂ ಪಂಡಿತರ) ಮನೆತನ. ಅವರ ತಂದೆ ಮೌಲಾನಾ ಖೈರುದ್ದೀನ್. ಅವರು ಭಾರತದ ಬಂಗಾಲ ಪ್ರಾಂತದವರು; ಆಜಾದ್ ಬಾಲ್ಯದಲ್ಲೇ ಪಶ್ತೊ, ಉರ್ದು, ಅರೆಬಿಕ್, ಹಿಂಡಕೊ, ಬಂಗಾಲಿ, ಹಿಂದಿ, ಇಂಗ್ಲೀಷ್ ಹೀಗೆ ಅನೇಕ ಭಾಷೆಗಳನ್ನು ಕಲಿತರು.

ಆಜಾದ್ ವಿಶೇಷತೆ ಎಂದರೆ, ಅವರು ಸಂಪೂರ್ಣವಾಗಿ ಧಾರ್ಮಿಕ ಮನೋಭಾವದವರು. ಆದರೂ, ಆಧುನಿಕ ಶಿಕ್ಷಣ ಮತ್ತು ವಿಜ್ಞಾನಗಳಿಗೆ ಅವರು ತಮ್ಮ ಬದುಕಿನಲ್ಲಿ ಅಪಾರ ಮಹತ್ವವನ್ನು ನೀಡಿದ್ದರು. ಹನಾಫಿ, ಫ್ಲಿಖ್, ಶರಿಯತ್, ಗಣಿತ, ತತ್ವಶಾಸ್ತ್ರ, ವಿಶ್ವ ಚರಿತ್ರೆ ಮತ್ತು ವಿಜ್ಞಾನ ಹೀಗೆ ಹತ್ತು ಹಲವು ವಿಷಯಗಳಲ್ಲಿ ಅಧ್ಯಯನ ಕೈಗೊಂಡರು.

ಕಲಕತ್ತಾದಲ್ಲಿ ಯುವಕ ಆಜಾದ್ ಆಧುನಿಕ ಸಾಹಿತ್ಯ ಮತ್ತು ಸಮಾಜವನ್ನು ಅಧ್ಯಯನ ಮಾಡಿದ. ಪಾಶ್ಚಿಮಾತ್ಯ ತತ್ವಶಾಸ್ತ್ರ, ಇತಿಹಾಸ ಮತ್ತು ಸಮಕಾಲೀನ ರಾಜಕಾರಣಗಳತ್ತಲೂ ಅವರಿಗೆ ಆಸಕ್ತಿ ಬೆಳೆಸಿಕೊಂಡ. ಸರ್ ಸೈಯದ್ ಅಹಮದ್ ಖಾನ್ ಅಂಥವರಿಂದ ಆಜಾದ್ ಬಹುವಾಗಿ ಆಕರ್ಷಿತನಾದ. ಪತ್ರಿಕೋದ್ಯಮ ಕ್ಷೇತ್ರದಲ್ಲೂ ತಮ್ಮ ಪ್ರತಿಭೆಯನ್ನು ತೋರಿದ. ಖಿಲಾಫತ್ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಸಂದರ್ಭದಲ್ಲಿ ಆಜಾದ್ ಗಾಂಧೀಜಿಗೆ ಪರಿಚಯವಾದರು. ಗಾಂಧೀಜಿಯ ಅಸಹಕಾರ ಚಳವಳಿ ಮತ್ತು ಅಹಿಂಸಾತ್ಮಕ ಹೋರಾಟದ ಪರಿಕಲ್ಪನೆ ಆಜಾದ್‌ರನ್ನು ಅಪಾರವಾಗಿ ಆಕರ್ಷಿಸಿತು.

ಅಫ್ಘಾನಿಸ್ತಾನ್, ಇರಾಕ್, ಇಜಿಪ್ಟ್, ಸಿರಿಯಾ ಮತ್ತು ಟರ್ಕಿ ದೇಶಗಳಿಗೆ ಭೇಟಿ ನೀಡಿದರು. ಅಲ್ಲಿ– ವಿಶೇಷವಾಗಿ ಇರಾಕ್‌ನಲ್ಲಿ–ಕ್ರಾಂತಿಕಾರಿಗಳು ಮುಂದಿಟ್ಟ ಸಾಮ್ರಾಜ್ಯಶಾಹಿ ವಿರೋಧಿ ಮತ್ತು ರಾಷ್ಟ್ರೀಯತಾವಾದಿ ದೃಷ್ಟಿಕೋನವನ್ನು ಆಜಾದ್ ಬಹುವಾಗಿ ಇಷ್ಟಪಟ್ಟರು.

ಅಂದಿನ ಮುಸ್ಲಿಂ ರಾಜಕಾರಣಿಗಳು ಭಾರತಕ್ಕೆ ಸ್ವಾತಂತ್ರ್ಯ, ಭಾರತದ ಭವಿಷ್ಯ ಮತ್ತು ರಾಷ್ಟ್ರೀಯ ಹಿತಕ್ಕಿಂತ ಕೋಮು ವಿಷಯಗಳಿಗೆ ಹೆಚ್ಚಿನ ಪ್ರಾಮುಖ್ಯವನ್ನು ನೀಡುತ್ತಿದ್ದರು. ಇದನ್ನು ಆಜಾದ್ ವಿರೋಧಿಸಿದರು; ಆಲ್ ಇಂಡಿಯಾ ಮುಸ್ಲಿಂ ಲೀಗ್ ಮುಂದಿಟ್ಟ ಕೋಮು ಆಧಾರಿತ ವಿಭಜನೆಯ ಪ್ರಸ್ತಾವನೆಯನ್ನು ಅವರು ತಿರಸ್ಕರಿಸಿದರು.

ಆಜಾದ್ ಪಡೆದಿದ್ದ ಶಿಕ್ಷಣದ ಹಿನ್ನೆಲೆ ನೋಡಿದರೆ, ಅವರು ಮುಸ್ಲಿಂ ಧರ್ಮಬೋಧಕ ಆಗಬೇಕಿತ್ತು. ಆದರೆ ಆ ಹೃದಯದಲ್ಲಿ ಕ್ರಾಂತಿಕಾರಿ ಕಿಡಿಗಳು ಜಾಗವನ್ನು ಕಂಡುಕೊಂಡಿದ್ದವು. ಹಾಗಾಗಿ ಅವರು ಸಾಮಾಜಿಕ, ರಾಜಕೀಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡರು. ಬ್ರಿಟಿಷ್ ವಿರೋಧಿ ಹೋರಾಟದಲ್ಲಿ ಸಕ್ರಿಯರಾದಾದರು. ಮುಂಬಯಿ ಪ್ರಾಂತ, ಸಂಯುಕ್ತ ಪ್ರಾಂತ, ಪಂಜಾಬ್ ಮತ್ತು ದೆಹಲಿ ಭಾಗಗಳಲ್ಲಿ ಆಜಾದ್ ಪ್ರವಾಸ ಕೈಗೊಳ್ಳಬಾರದೆಂದು ಬ್ರಿಟಿಷ್ ಆಡಳಿತ ಆದೇಶ ಹೊರಡಿಸಿತು. ನಂತರ, ಅವರನ್ನು ಡಿಫೆನ್ಸ್ ಆಫ್ ಇಂಡಿಯಾ ರೆಗ್ಯುಲೇಷನ್ಸ್ ಕಾಯ್ದೆ ಅಡಿ ಬಂಧಿಸಿ, ಜೈಲಿಗೆ ಕಳುಹಿಸಲಾಯಿತು. ಅವರು **'ಘುಬರ್–ಇ–ಖಾತಿರ್'** ಉರ್ದು ಕೃತಿಯನ್ನು ಜೈಲಿನಲ್ಲೇ ರಚಿಸಿದರು. ತಮ್ಮ ಜೊತೆಗಿದ್ದ ಕಾಂಗ್ರೆಸ್ ಹಿರಿಯ ನಾಯಕರಿಗೆ ಜೈಲಿನಲ್ಲೇ ಉರ್ದು ಮತ್ತು ಪರ್ಷಿಯನ್ ಭಾಷೆಗಳನ್ನು ಕಲಿಸಿದರು.

ಈ ಹಂತದಲ್ಲಿ ಮುಸ್ಲಿಂ ಸಂಕುಚಿತವಾದಿ ಮುಖಂಡರು ಪ್ರತ್ಯೇಕ ಕೋಮು ಮತಕ್ಷೇತ್ರಗಳ ರಚನೆ ಹಾಗೂ ಕೋಮು ಆಧಾರದಲ್ಲಿ ಚುನಾವಣೆಗಳು ನಡೆಯಬೇಕೆಂಬ ಬೇಡಿಕೆಯನ್ನು ಇಟ್ಟಾಗ, ಅದನ್ನು ಆಜಾದ್ ಖಡಾಖಂಡಿತವಾಗಿ ತಿರಸ್ಕರಿಸಿದರು. ಇದು ಹಿಂದೂ–ಮುಸ್ಲಿಂ ಸಮುದಾಯಗಳ ನಡುವಣ ಕಂದಕ ಹೆಚ್ಚಿಸುವುದು ಗ್ಯಾರಂಟಿ ಎಂದು ಗುಡುಗಿದರು.

1923ರಲ್ಲಿ ಆಜಾದ್ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಗೊಂಡರು. ಅವರು ಆ ಹುದ್ದೆಗೆ ಬಂದ ಮೊದಲನೇ ಅತಿ ಕಿರಿಯ ಯುವಕ ಎನಿಸಿದರು. 1924ರಲ್ಲಿ ಏಕತಾ ಸಮಾವೇಶ ಏರ್ಪಾಟು ಆದಾಗಲೂ ಆಜಾದ್ ಅಧ್ಯಕ್ಷತೆ ವಹಿಸಲು ಆಯ್ಕೆ ಯಾದರು. ಅವರು ಆಗ ಗಾಂಧೀಜಿಯ ಚಿಂತನೆಯನ್ನು ಜೊತೆಗೆ ಸಾಮಾಜಿಕ ಮತ್ತು ಕೋಮುಸಾಮರಸ್ಯದ ಮಹತ್ವವನ್ನು ಮನಗಾಣಿಸಿ ಕೊಟ್ಟರು.

1928ರಲ್ಲಿ ಸೈಮನ್ ಕಮಿಷನ್ ಬಂದಾಗ, ದೇಶಾದ್ಯಂತ ಅದರ ವಿರುದ್ಧ ಸಭೆಗಳನ್ನು ಸಂಘಟಿಸುವಲ್ಲಿ ಆಜಾದ್ ಶ್ರಮಿಸಿದರು. ಧರ್ಮದ ಆಧಾರದಲ್ಲಿ ಪ್ರತ್ಯೇಕ ಮತಕ್ಷೇತ್ರಗಳು ಮುಂದುವರೆಯುವುದನ್ನು ಆಜಾದ್ ಒಪ್ಪಲಿಲ್ಲ. ಬದಲಾಗಿ, ಸ್ವತಂತ್ರ ಭಾರತವು ಜಾತ್ಯತೀತತೆಗೆ ಸಂಪೂರ್ಣವಾಗಿ ಬದ್ಧವಾಗಿರಬೇಕು ಎಂಬ ನಿಲವನ್ನು ತಾಳಿದರು. ಆ ಕಾಲದಲ್ಲೇ ಅವರು ಹಿಂದೂ–ಮುಸ್ಲಿಂ ಏಕತೆ ಮತ್ತು ಸ್ವತಂತ್ರ ಭಾರತಕ್ಕೆ ಜಾತ್ಯತೀತತೆ ಮತ್ತು ಸಮಾಜವಾದ ತತ್ವಗಳು ಅತ್ಯಗತ್ಯ ಎಂದು ಪ್ರತಿಪಾದಿಸಿದರು.

ಇದೇ ಅವಧಿಯಲ್ಲಿ ಭಾರತದಲ್ಲಿನ ವಿವಿಧ ರೀತಿಯ ಅಸಮಾನತೆಯನ್ನು, ಬಡತನವೂ ಸೇರಿದಂತೆ ಇತರ ರಾಷ್ಟ್ರೀಯ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು 'ಸಮಾಜವಾದಿ' ಮಾರ್ಗವನ್ನು ಅನುಸರಿಸುವ ವಿಷಯದಲ್ಲಿ ಜವಾಹರಲಾಲ್ ನೆಹರೂ ನಿಲವಿಗೆ ಆಜಾದ್ ಸಹಮತಿ ವ್ಯಕ್ತಪಡಿಸಿದರು. 1930ರಲ್ಲಿ ಗಾಂಧೀಜಿ ಉಪ್ಪಿನ ಸತ್ಯಾಗ್ರಹ ಕೈಗೊಂಡಾಗ, ಆಜಾದ್ ಅದಕ್ಕೆ ಪೂರಕವಾಗಿ ಅನೇಕ ಚಟುವಟಿಕೆಗಳನ್ನು ನಡೆಸಿದರು.

1936ರ ಲಖನೌ ಕಾಂಗ್ರೆಸ್ ಅಧಿವೇಶನದ ಹೊತ್ತಿಗೆ ನೆಹರೂ, ಬೋಸ್, ಜಯಪ್ರಕಾಶ ನಾರಾಯಣ ಮುಂತಾದವರ ಗುಂಪಿನೊಂದಿಗೆ ಆಜಾದ್ ತಮ್ಮನ್ನು ಗುರುತಿಸಿಕೊಂಡರು. ಮುಸ್ಲಿಂ ಲೀಗ್ ನಡುವೆ ಹಾರ್ದಿಕ ಸಂಬಂಧ ಉಳಿಯುವ ನಿಟ್ಟಿನಲ್ಲಿ ನೆಹರೂ–ಜಿನ್ನಾ ಮಾತುಕತೆ ನಡೆಸುವುದು ಸೂಕ್ತ ಎಂಬ ಸಲಹೆಯನ್ನು ಆಜಾದ್ ನೀಡಿದರು. ಈ ಅವಧಿಯಲ್ಲಿ ಆಜಾದ್, ಭಾರತದ ರಾಷ್ಟ್ರೀಯ ಮೇರು ನಾಯಕರಾಗಿದ್ದರು.

"ಹಿಂದೂಗಳಿಗಾಗಿ ಮತ್ತು ಮುಸ್ಲಿಮರಿಗಾಗಿ ಪ್ರತ್ಯೇಕ ದೇಶವನ್ನು ಸೃಷ್ಟಿಸುವುದು ಸರಿಯಲ್ಲ; ಧಾರ್ಮಿಕ ಪ್ರತ್ಯೇಕತಾವಾದವು ಅಪಾರ ಕೆಡುಕನ್ನು ತಂದೊಡ್ಡುತ್ತದೆ" ಎಂದು ಎಚ್ಚರಿಸಿ, "ಹಿಂದೂಗಳು ಮತ್ತು ಮುಸ್ಲಿಮರು ಅಪೂರ್ವ ಧರ್ಮಗಳನ್ನು ಒಪ್ಪಿಕೊಂಡಿರುವ ಎರಡು ಸಮುದಾಯಗಳು. ಆದರೆ ಅವರಿಬ್ಬರೂ ಭಾರತೀಯರು; ಹಿಂದೂಗಳಿಗೂ ಮತ್ತು ಮುಸ್ಲಿಮರಿಗೂ ರಾಷ್ಟ್ರೀಯತೆ ಒಂದೇ. ಇಬ್ಬರೂ ಒಂದೇ ರಾಷ್ಟ್ರಕ್ಕೆ ಸೇರಿದವರು; ಇದನ್ನು ಯಾರೂ ಮರೆಯತಕ್ಕದ್ದಲ್ಲ; ಇವರನ್ನು ಅಗಲಿಸುವ ಪ್ರಯತ್ನವನ್ನು ಯಾರು ಮಾಡಿದರೂ ಮನುಷ್ಯತ್ವಕ್ಕೆ ಬಗೆಯುವ ಅಪಚಾರವಾಗುತ್ತದೆ" ಎಂದು ಆಜಾದ್ ತಿಳಿಸಿ ಹೇಳಿದರು.

ಈ ಎಲ್ಲಾ ಸಂದರ್ಭಗಳಲ್ಲಿ ಆಜಾದ್ ತಮ್ಮ ಇತರ ಸಂಗಾತಿಗಳಾದ ಡಾ. ಮುಖ್ತಾರ್ ಅಹಮದ್ ಅನ್ಸಾರಿ, ಹಕೀಂ ಅಜ್ಮಲ್ ಖಾನ್ ಮುಂತಾದವರ ಪೂರ್ಣ ನೆರವನ್ನು ಪಡೆದು, ಗಾಂಧಿ ಚಿಂತನೆ ಮತ್ತು ವ್ಯಕ್ತಿತ್ವಕ್ಕೆ ಅವರು ಅತಿ ಸನಿಹವಾದರು. ಪ್ರವಾದಿ ಮೊಹಮ್ಮದ್ ಅವರು ಸೂಚಿಸಿದ್ದ ಸರಳ ಜೀವನ ಮತ್ತು ಭೌತಿಕ ಸುಖ ನೀಡುವ ವಸ್ತುಗಳ ತ್ಯಾಜ್ಯ ತತ್ವವನ್ನು ಆಜಾದ್ ಚಾಚೂತಪ್ಪದೆ ಪಾಲಿಸಿದರು.

".. ಭಾರತದ ಮೇಲೆ ಇಸ್ಲಾಂ ಅಚ್ಚಳಿಯದ ಛಾಪನ್ನು ಮೂಡಿಸಿದೆ. ಹಿಂದೂ ಧರ್ಮ ಇಲ್ಲಿ ಸಾವಿರಾರು ವರ್ಷಗಳಿಂದ ಅಸ್ತಿತ್ವದಲ್ಲಿ ಇದ್ದರೆ, ಇಸ್ಲಾಂ ಒಂದು ಸಾವಿರಕ್ಕೂ ಹೆಚ್ಚು ವರ್ಷಗಳಿಂದ ಇಲ್ಲಿ ಅಸ್ತಿತ್ವದಲ್ಲಿ ಇದೆ. ಈ ದೇಶ ಯಾವುದೇ ಒಂದು ಧರ್ಮದವರಿಗೆ ಸೇರಿದ್ದಲ್ಲ. ಹಿಂದೂಗಳು ಹೆಮ್ಮೆಯಿಂದ 'ಇದು ಭಾರತ ನಮ್ಮ ದೇಶ' ಎಂದು ಅಭಿಮಾನ–ಸಂಭ್ರಮದಿಂದ ಹೇಳುವ ಹಾಗೆ ಮುಸ್ಲಿಮರೂ ಕೂಡ ಹೆಮ್ಮೆಯಿಂದ 'ಇದು ಭಾರತ; ನಮ್ಮ ದೇಶ' ಎಂದು ಅಭಿಮಾನ–ಸಂಭ್ರಮದಿಂದ ಹೇಳುತ್ತಾರೆ." ಎಂದು ಆಜಾದ್ ಎತ್ತಿ ಹೇಳಿದರು.

15 ಆಗಸ್ಟ್ 1947ರಂದು ಸ್ವತಂತ್ರ ಭಾರತ ಮತ್ತು ಸ್ವತಂತ್ರ ಪಾಕಿಸ್ತಾನ ರಾಷ್ಟ್ರಗಳು ಉದಯವಾದವು. ಹಿಂದೆಯೇ ಹಿಂದೂ–ಮುಸ್ಲಿಂ ದಂಗೆಗಳೂ ನಡೆದವು. ಪಂಜಾಬ್, ಬಂಗಾಲ, ಬಿಹಾರ, ದೆಹಲಿ ಮತ್ತು ಕೆಲವು ಇತರ ಪ್ರಮುಖ ನಗರಗಳಲ್ಲಿ ಕೋಮು ಬೆಂಕಿ ಹೊತ್ತಿ ಉರಿಯಿತು. ಅಸಂಖ್ಯ ಹಿಂದೂ ಮುಸ್ಲಿಮರು ಬೆಂಕಿಗೆ ಆಹುತಿಯಾದರು; ಸಹಸ್ರ ಸಹಸ್ರ ಜನರು ಗಾಯ ಗೊಂಡರು; ಲಕ್ಷ ಲಕ್ಷ ಜನ ಅನಾಥರಾದರು. ಪಾಕಿಸ್ತಾನ ಭಾಗದಿಂದ ಹಿಂದೂಗಳು, ಸಿಕ್ಖರು ಭಾರತದತ್ತ ದಂಡು ದಂಡಾಗಿ ಓಡಿ ಬಂದರೆ, ಅಷ್ಟೇ ಸಂಖ್ಯೆಯಲ್ಲಿ ಮುಸ್ಲಿಮರು ಪಾಕಿಸ್ತಾನ, ಪೂರ್ವ ಪಾಕಿಸ್ತಾನ ಕಡೆಗೆ ದಂಡು ದಂಡಾಗಿ ಓಡಿ ಬಂದರು. ಹಿಂದೂ–ಮುಸ್ಲಿಮರು ಭಾರಿ ನೋವು ಅನುಭವಿಸಿದರು. "ಭಾವನೆಗೆ ಬಲಿಯಾಗಬೇಡಿ; ಸಮಚಿತ್ತ ದಿಂದ ದಾರಿಯನ್ನು ಕಂಡುಕೊಳ್ಳಿರಿ; ನಿಮ್ಮ ನಿಜವಾದ ಮಿತ್ರರು ಯಾರು? ಶತೃಗಳು ಯಾರು? ಎಂಬುದನ್ನು ಅರ್ಥ ಮಾಡಿಕೊಳ್ಳಿ" ಎಂದು ಆಜಾದ್ ಕರೆ ನೀಡಿದರು.

"ನೀವು ಹಿಂದೂಗಳೇ ಆಗಿರಲಿ, ಮುಸ್ಲಿಮರೇ ಆಗಿರಲಿ, ನಿಮಗೆ ಇಲ್ಲಿ ಉಳಿಯಲು ಎಲ್ಲಾ ರೀತಿಯ ರಕ್ಷಣೆಯನ್ನು ನೀಡಲಾಗುತ್ತದೆ. ಹಿಂದೂ–ಮುಸ್ಲಿಂ ದ್ವೇಷವನ್ನು ಹೃದಯದಲ್ಲಿ ತುಂಬಿಕೊಳ್ಳಬೇಡಿ. ನಾವೆಲ್ಲರೂ ಭಾರತೀಯರು. ಅನಿವಾರ್ಯವಾಗಿ ದೇಶವು ವಿಭಜನೆ ಗೊಂಡಿದೆ. ಮುಸ್ಲಿಮರು ಎಲ್ಲರೂ ಪಾಕಿಸ್ತಾನಗಳಿಗೆ ಹೋಗಬೇಕಿಲ್ಲ.. .." ಎಂದು ನೂರಾರು ಸಭೆಗಳಲ್ಲಿ ಮಾತನಾಡಿದ ಆಜಾದ್, ಸರ್ಕಾರದ ವತಿಯಿಂದ ಬಂಗಾಲ, ಅಸ್ಸಾಂ, ಪಂಜಾಬ್, ಬಿಹಾರ ಪ್ರಾಂತಗಳಲ್ಲಿ ಸಂತ್ರಸ್ತರಾದವರಿಗೆ ಆಹಾರ, ವಸತಿ ಒದಗಿಸುವ ಕಾರ್ಯಗಳಿಗೆ ಚಾಲನೆ ನೀಡಿದರು.

"ಭಾರತೀಯ ಎಂದು ಗುರುತಿಸಿಕೊಳ್ಳಲು ನಾನು ಹೆಮ್ಮೆಪಡುತ್ತೇನೆ. ಭಾರತೀಯ ರಾಷ್ಟ್ರೀಯತೆಯ ಒಂದು ಭಾಗ ನಾನು. ಇದನ್ನು ನಾನು ಕ್ಷಣಮಾತ್ರಕ್ಕೂ ಮುಚ್ಚಿಡಲು ಬಯಸುವುದಿಲ್ಲ. ಈ ರಾಷ್ಟ್ರೀಯತೆಯನ್ನು ಹಿಂದೂಗಳು, ಮುಸ್ಲಿಮರು, ಕ್ರೈಸ್ತರು, ಇತರ ಧರ್ಮೀಯರು ಹಾಗೂ ಧರ್ಮಗಳನ್ನೇ ಒಪ್ಪಿರದ ಅನೇಕ ಬಡಕಟ್ಟುಗಳು ನಿರ್ಮಿಸಿದ್ದಾರೆ; ಅವರೆಲ್ಲರೂ ಭಾರತೀಯ ರಾಷ್ಟ್ರೀಯತೆಯ ಅವಿಭಾಜ್ಯ ಅಂಗವಾಗಿದ್ದಾರೆ. ಇವರೆಲ್ಲರ ಚಿಂತನೆ ಮತ್ತು ಪರಿಶ್ರಮದಿಂದ ಭಾರತೀಯ ರಾಷ್ಟ್ರೀಯತೆ ನಿರ್ಮಾಣ ಗೊಂಡಿದೆ.. .." ಎಂದು ಒಂದು ಭಾಷಣ ದಲ್ಲಿ ಅವರು ಒತ್ತಿ ಹೇಳಿದ್ದರು.

ಸ್ವತಂತ್ರ ಭಾರತದಲ್ಲಿ ಆಜಾದ್ ಶಿಕ್ಷಣ ಮಂತ್ರಿಯಾದರು; ಅನಕ್ಷರತೆ ಮತ್ತು ಶಿಕ್ಷಣ ಸೌಲಭ್ಯಗಳ ಕೊರತೆಯನ್ನು ಅವರು ಗುರುತಿಸಿದರು. ಶಾಲೆಗಳ ಸಂಖ್ಯೆ ಮತ್ತು ಗುಣಮಟ್ಟ ಹೆಚ್ಚುವುದಕ್ಕೆ ಅವರು ವಿಶೇಷ ಕ್ರಮಗಳನ್ನು ಕೈಗೊಂಡರು. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವು ಕಡ್ಡಾಯವಾಗಿ ಮತ್ತು ಉಚಿತವಾಗಿ ಲಭ್ಯವಾಗುವ ನಿಟ್ಟಿನಲ್ಲಿ ಅವರು ಹಲವು ಯೋಜನೆಗಳನ್ನು

ರೂಪಿಸಿದರು. ಗ್ರಾಮೀಣ ಬಾಲಕಿಯರಿಗೆ ಶಿಕ್ಷಣ ಸೌಲಭ್ಯಗಳನ್ನು ಒದಗಿಸುವ ವಿಷಯಕ್ಕೆ ಆಜಾದ್ ಆದ್ಯತೆ ನೀಡಿದರು. ಇಷ್ಟೇ ಮಹತ್ವವನ್ನು ಅವರು ವಯಸ್ಕರ ಶಿಕ್ಷಣಕ್ಕೂ, ವೃತ್ತಿ ಶಿಕ್ಷಣಕ್ಕೂ ಕೊಟ್ಟರು.

1948ರ ಜನೇವರಿ 16ರಂದು ನಡೆದ ಅಖಿಲ ಭಾರತ ಶಿಕ್ಷಣ ಸಮಾವೇಶದಲ್ಲಿ ಮಾತನಾಡಿದ ಅವರು "ಪ್ರತಿಯೊಬ್ಬ ವ್ಯಕ್ತಿಗೂ ಶಿಕ್ಷಣ ಪಡೆಯುವ ಹಕ್ಕಿದೆ; ಇದು ಆಜನ್ಮ ಇರುವ ಹಕ್ಕು. ಶಿಕ್ಷಣ ಪಡೆಯಲು ವಯಸ್ಸಿನ ಮಿತಿ ಇಲ್ಲ; ಬಾಲಕ–ಬಾಲಕಿಯರಿಗೆ ಶಿಕ್ಷಣದ ಅವಶ್ಯಕತೆ ಇರುವ ಹಾಗೆಯೇ ವಯಸ್ಕ ಪುರುಷ–ಮಹಿಳೆಯರಿಗೂ ಶಿಕ್ಷಣ ಅತ್ಯವಶ್ಯ. ಶಿಕ್ಷಣ ಇಲ್ಲದೇ ಹೋದರೆ, ಯಾರೂ ಸಾಮರ್ಥ್ಯವನ್ನು ಪಡೆಯಲಾರರು...." ಎಂದು ಹೇಳಿದರು.

ಭಾರತದ ಮೊದಲನೇ ಐಐಟಿ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ಸ್ಥಾಪನೆಯಾಗಿದ್ದು ಆಜಾದ್ ಕಾಲದಲ್ಲಿ ಅಂದರೆ 1951ರಲ್ಲಿ. 1953ರಲ್ಲಿ ಅವರು ವಿಶ್ವವಿದ್ಯಾಲಯ ಅನುದಾನ ಆಯೋಗ (ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್) ಸ್ಥಾಪನೆಗೆ ಕಾರಣರಾದರು. ಬೆಂಗಳೂರಿನಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯ ಅಭಿವೃದ್ಧಿಗೆ ಅವರು ಸಹಯೋಗ ನೀಡಿದರು. ಅವರ ಮೇರು ಕೃತಿ 'ಇಂಡಿಯಾ ವಿನ್ಸ್ ಫ್ರೀಡಂ' 1957ರಲ್ಲಿ ಪ್ರಕಟವಾಯಿತು.

1989ರಲ್ಲಿ ಮೌಲಾನಾ ಆಜಾದ್ ಅಬುಲ್ ಕಲಾಂ ಆಜಾದ್ ಅವರ ಜನ್ಮಶತಮಾನೋತ್ಸವ ನಡೆಯಿತು. ಆಗ, ಕೇಂದ್ರ ಸರ್ಕಾರವು 'ಮೌಲಾನಾ ಆಜಾದ್ ಶಿಕ್ಷಣ ಫೌಂಡೇಷನ್' ಸ್ಥಾಪಿಸಿತು. ಸಮಾಜದಲ್ಲಿ ಹಿಂದುಳಿದ ಸಮುದಾಯಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ವಿಶೇಷ ಯೋಜನೆಗಳನ್ನು ರೂಪಿಸುವುದು ಮತ್ತು ಜಾರಿಗೊಳಿಸುವುದು ಇದರ ಧ್ಯೇಯ. ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಉನ್ನತ ಶಿಕ್ಷಣ ಕೈಗೊಳ್ಳುವುದಕ್ಕೆ ಐದು ವರ್ಷಗಳ ಕಾಲ ಆರ್ಥಿಕ ಸಹಾಯ ಒದಗಿಸುವ ದೃಷ್ಟಿಯಿಂದ, ಮೌಲಾನಾ ಅಬುಲ್ ಕಲಾಂ ಆಜಾದ್ ಹೆಸರಿನಲ್ಲಿ 'ರಾಷ್ಟ್ರೀಯ ಫೆಲೋಷಿಪ್' ನೀಡಲಾಗುತ್ತಿದೆ.

ಆಜಾದ್ ಹೆಸರಿನಲ್ಲಿ ನವದೆಹಲಿಯಲ್ಲಿ ಮೆಡಿಕಲ್ ಕಾಲೇಜ್ ಇದೆ; ಭೂಪಾಲ್‌ನಲ್ಲಿ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ; ಹೈದರಾಬಾದ್‌ನಲ್ಲಿ ಉರ್ದು ವಿಶ್ವವಿದ್ಯಾಲಯ ಸಹಸ್ರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದೆ. ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ಸುಸಜ್ಜಿತ ಗ್ರಂಥಾಲಯ ಇದೆ. ದೆಹಲಿ ವಿಶ್ವವಿದ್ಯಾಲಯಯಲ್ಲಿ ಸಾಮಾಜಿಕ ಶಿಕ್ಷಣ ಕೇಂದ್ರ ವಿದ್ಯಾ ಸೌಲಭ್ಯ ಒದಗಿಸುತ್ತಿದೆ. ಕೊಲಕತ್ತಾದಲ್ಲಿ ಮೌಲಾನಾ ಆಜಾದ್ ಕಾಲೇಜ್ ಇದೆ. ಜಮ್ಮುನಲ್ಲಿ ಮೌಲಾನಾ ಆಜಾದ್ ಕ್ರೀಡಾಂಗಣ ನಿರ್ಮಾಣವಾಗಿದೆ.

ದೇಶದ ಪ್ರತಿಷ್ಠಿತ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದ ಸ್ಥಾಪಕರಲ್ಲಿ ಒಬ್ಬರು ಮೌಲಾನಾ ಅಬುಲ್ ಕಲಾಂ ಆಜಾದ್. ಅವರ ಪಾರ್ಥಿವ ಶರೀರಕ್ಕೆ ದೆಹಲಿಯಲ್ಲಿ ಜಾಮಾ ಮಸೀದಿಯ ಪಕ್ಕದಲ್ಲಿ ಸ್ಥಾನ ಒದಗಿಸಲಾಗಿದೆ.

ಮೌಲಾನಾ ಅಬುಲ್ ಕಲಾಂ ಆಜಾದ್ ಅವರನ್ನು ಮಹಾತ್ಮಾ ಗಾಂಧೀಜಿ "ಅವರು ಮಹಾಜ್ಞಾನಿ; ಪ್ಲೆಟೊ, ಅರಿಸ್ಟಾಟಲ್ ಮತ್ತು ಪ್ಯಾಥಾಗೊರಸ್ ಅಂಥವರು ಗಳಿಗೆ ಸರಿಸಾಟಿ" ಎಂದು ಬಣ್ಣಿಸಿದರು; ಸ್ವತಂತ್ರ ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ "ಸ್ವಾತಂತ್ರ್ಯ ಹೋರಾಟಕ್ಕೆ ಆಜಾದ್ 'ಮೀರ್–ಇ–ಕಾರವಾನ್'(ಜಾಥಾದ ನೇತಾರ) ಆಗಿದ್ದರು" ಎಂದು ಬಣ್ಣಿಸಿದರು.

ಮೌಲಾನಾ ಅಬುಲ್ ಕಲಾಂ ಆಜಾದ್ ಅವರ ಜನ್ಮದಿನ (11 ನವೆಂಬರ್)ವನ್ನು ದೇಶಾದ್ಯಂತ "ರಾಷ್ಟ್ರೀಯ ಶಿಕ್ಷಣ ದಿನ"ವಾಗಿ ಆಚರಿಸಲಾಗುತ್ತಿದೆ.

**ಮಂಗ್ಳೂರ ವಿಜಯ**

ದೂರವಾಣಿ: 94491–02294